# ಮಳೆಗಾಲದ ಮೇಕಪ್



ಮಳೆಗಾಲದಲ್ಲಿ ಸೌಂದರ್ಯಪ್ರಸಾಧನ ಅದರಲ್ಲೂ ಮುಖದ ಮೇಕಪ್ ಅನ್ನು ಹಾಗೇ ಉಳಿಸಿಕೊಳ್ಳುವುದು ಒಂದು ಸವಾಲು. ವಾತಾವರಣದಲ್ಲಿ ತೇವಾಂಶ ಹೆಚ್ಚಿರುವುದರಿಂದ ತ್ವಚೆಯ ಮೇಲೆ ಅದು ಪರಿಣಾಮ ಬೀರಿ ಪ್ರಸಾಧನಗಳ ಇರುವಿಕೆಯೂ ಮರೆಮಾಚುವುದು. ಹಾಗಾದರೆ ಮೇಕಪ್‌ನ ತಾಜಾತನ ಉಳಿಸಿಕೊಳ್ಳಲು ಏನು ಮಾಡಬೇಕು?

■ ಅಭಿಲಾಷಾ ಬಿ.ಸಿ.

‘ಮೋಡಗಳ ಜಡೆ ಬಿಚ್ಚಿ ಮೈ ತೊಳೆದುಕೊಳುತಿಹಳು ಬಯಲ ಭಾಮಿನಿ ಜಗದ ಮನೆಯ ಮೇಲೆ. ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ ಇದಕೆ ಜನರೆನ್ನುವರು ಮಳೆಯ ಲೀಲೆ...’ ಮಳೆಗೂ ಸೌಂದರ್ಯಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಸಾಕ್ಷೀಕರಿಸುತ್ತವೆ ಈ ಸಾಲುಗಳು. ಭಾಮಿನಿಯ ಸ್ನಾನದ ಪರಿಯೇ ಮಳೆಯಾಗಿ ಇಳಿದಿದೆ ಎನ್ನುವುದು ಕವಿಯ ವರ್ಣನೆ.

ಭಾಮಿನಿಯ ಕೇಶರಾಶಿಯ ನೀರು ತೊಟ್ಟಿಕ್ಕಲು ಶುರುವಾದಂತೆ ಒಂದಷ್ಟು ಬೆಚ್ಚನೆಯ ಬಯಕೆಗಳು ಮೆತ್ತಗೆ ಮೊಳಕೆಯೊಡೆಯುತ್ತವೆ. ಪಿರಿ ಪಿರಿ ಮಳೆಯಲ್ಲಿ ಜೊತೆ ಜೊತೆಗೆ ಹೆಜ್ಜೆಹಾಕುವುದಿರಲಿ, ಧುಮ್ಮಿಕ್ಕುವ ಜಲಪಾತದ ಸೌಂದರ್ಯವನ್ನು ಕಣ್ತುಂಬಿಕೊಳ್ಳುವುದಿರಲಿ, ದಟ್ಟಡವಿಯ ಚಾರಣವೇ ಇರಲಿ ಈ ಅನುಭವಗಳಿಗಾಗಿ



ಚಂದ್ರರೇಖಾ

ಮಳೆಗಾಲಕ್ಕಾಗಿ ಕಾಯುವುದೇ ಸೊಗಸು. ಈ ಖುಷಿಗಳ ನಡುವೆಯೂ ನಿತ್ಯ ಕಚೇರಿಗಳಿಗೆ ತೆರಳುವ ಹೆಂಗಳೆಯರಿಗೆ, ಮಾರುಕಟ್ಟೆಗೆ ಹೋಗುವ ಗೃಹಿಣಿಯರಿಗೆ, ಶಾಪಿಂಗ್ ಹೋಗುವ ಹುಡುಗಿಯರಿಗೆ ಅಥವಾ ಮಳೆಗಾಲಕ್ಕಾಗಿಯೇ ಕಾದು ಪ್ರವಾಸ ಹೊರಡುವವರಿಗೆ ಮಳೆಗಾಲದಲ್ಲಿ ಮೇಕಪ್ ಕಾಪಾಡಿಕೊಳ್ಳುವುದು ಸವಾಲು.

ಮಳೆಗಾಲದಲ್ಲಿ ಮನೆಯಿಂದ ಹೊರಗೆ ಕಾಲಿಡಬೇಕಾದಲ್ಲಿ ಹೆಣ್ಣುಮಕ್ಕಳಂತೂ ಎಚ್ಚರಿಕೆಯಿಂದ ಕೆಲವು ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ ಎನ್ನುತ್ತಾರೆ ಬೆಂಗಳೂರಿನ ‘ಹಿಡನ್ ಶೇಡ್ಸ್ ಮೇಕ್ ಓವರ್ಸ್‌ನ’ ಪ್ರಸಾಧನ ಕಲಾವಿದೆ ಚಂದ್ರರೇಖಾ.

ಮಳೆಗಾಲದ ಆಯ್ಕೆಗಳನ್ನು ಸೂಕ್ತವಾಗಿ ಮಾಡಿದರೆ ಸುರಿವ ಮಳೆಯನ್ನು ಲೆಕ್ಕಿಸದೇ ಆರಾಮದಾಯಕವಾಗಿ ಓಡಾಡಬಹುದೆನ್ನುವುದು ಅವರ ಅಭಿಪ್ರಾಯ. ಮಳೆಗಾಲದಲ್ಲಿ ಹೊರಹೋಗುವುದೇ ಗೋಳು ಎಂದು ಗೊಣಗುವವರಿಗಾಗಿಯೇ ಅವರು ಒಂದಷ್ಟು ಸಲಹೆಗಳನ್ನೂ ನೀಡಿದ್ದಾರೆ.